ದಿನಾಂಕ 22-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟಿಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಬಿ.ಹೆಚ್ ವಕೀಲರಿಂದ**

1) ನಾನು ಇಲ್ಲಿಯವರೆಗೆ ಸುಮಾರು 10-20 ಟ್ರ್ಯಾಪ್ ಪ್ರಕರಣಗಳಲ್ಲಿ ಭಾಗವಹಿಸಿದ್ದೇನೆ. ನಾನು ನಿ.ಪಿ.2 ನ್ನು ಮಾತ್ರವೇ ದಾಖಲಿಸಿದ್ದೆನೆ. ನಿ.ಪಿ.4 ನ್ನು ದಾಖಲಿಸಿಲ್ಲ. ಅದನ್ನು ತನಿಖಾಧಿಕಾರಿ ಉಕ್ತಲೇಖನ ನೀಡಿದ್ದರು. ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಕ್ಷೀರು ಸ್ಥಳಕ್ಕೆ ತೆಗೆದುಕೊಂಡು ಹೋಗಿಲ್ಲ. ನಾವು ಠಾಣೆಯನ್ನು ಬಿಟ್ಟಾಗ ಸುಮಾರು 11-45 ಗಂಟೆ ಸಮಯ. ನಾವು ತಕ್ಷೀರು ಜಾಗೆಗೆ ಸಿಟಿ ಬಸ್ಸು ನಿಲ್ದಾಣ್ - ಎಂಜಿಎಂ ಕಾಲೇಜು ಮೂಲಕವೇ ಹೋಗಿದ್ದೇವೆ. ನಾವು ಅರ್ ಟಿ ಓ ಕಚೇರಿಯ ಬಳಿ ಬರುತ್ತಿದ್ದಾಗ ಸುಮಾರು 12.15 ಗಂಟೆಯ ಸಮಯ. ಆದಿನ ನಾನು ಪಿರ್ಯಾಧಿಯೊಂದಿಗೆ ಕಚೇರಿ ಒಳಗೆ ಹೋಗಿಲ್ಲ. ಪಿರ್ಯಾಧಿಯೊಂದಿಗೆ ನೆರಳು ಸಾಕ್ಷಿದಾರ ಮಾತ್ರವೇ ಹೋಗಿದ್ದರು. ನಾವು ಆರ್ ಟಿ ಓ ಕಚೇರಿ ಒಳಗೆ ಹೋದಾಗ ಮಧ್ಯಾಹ್ನದ ಸುಮಾರು 2.30 ಗಂಟೆಯ ಸಮಯ. ನಾನು 1 ನೇ ಆರೋಪಿಯ ಕೋಣೆಯ ಒಳಗೆ ಹೋದಾಗ ಸುಮಾರು 2.35 ರ ಸಮಯವಾಗಿರಬಹುದು.

2) ಚಾಸಾ-1 ವಾಯ್ಸು ರೆಕಾರ್ಡರ್ ನ್ನು ಆನ್ ಮಾಡಿಕೊಂಡು ಹೋಗುವಾಗ ನಾನು ಅಲ್ಲಿ ಇರಲಿಲ್ಲ. ನಾನು ವಾಯ್ಸು ರೆಕಾರ್ಡರ್ ನಲ್ಲಿಯ ಸಂಭಾಷಣೆಗಳನ್ನು ಕೇಳಿದ್ದೇನೆ. ನಾನು ತನಿಖಾಧಿಕಾರಿಯೊಂದಿಗೆ 1 ನೇ ಆರೋಪಿಯ ಕೋಣೆಯನ್ನು ಪ್ರವೇಶಿಸಿದ್ದೆ. ನಾನು ಚಾಸಾ-1 ಮತ್ತು ನೆರಳು ಸಾಕ್ಷಿದಾರೊಂದಿಗೆ ವೈಯಕ್ತಿಕವಾಗಿ ಮಾತನಾಡಿಲ್ಲ. ನನಗೆ 1 ನೇ ಆರೋಪಿಯ ಕೋಣೆಯ ಒಳಗೆ ಹೋಗಲು ತನಿಖಾಧಿಕಾರಿ ಆದೇಶಿಸಿದ್ದರು. ಆದಿನ ನಾನು 2.45 ರ ಸಮಯಕ್ಕೆ 1 ನೇ ಆರೋಪಿಯ ಕೋಣೆಯ ಒಳಗೆ ಹೋಗಿ ಸಂಜೆ 8.45 ರವರೆಗೆ ಆ ಕೋಣೆಯಲ್ಲಿಯೇ ಇದ್ದೆ. ಆದಿನ ಮಧ್ಯಾಹ್ನ 2.45 ರಿಂದ ಸಂಜೆ 8.45 ರ ಮಧ್ಯದಲ್ಲಿ ಆ ಕೋಣೆಯಿಂದ ಹೊರಗೆ ಹೋಗಿದ್ದು ಈಗ ನೆನಪಿಲ್ಲ. 1 ನೇ ಆರೋಪಿಯ ಕೋಣೆಯಲ್ಲಿ ಸಿಸಿ ಟಿವಿ ಇರುವ ಬಗ್ಗೆ ಮೊದಲು ಗೊತ್ತಿರಲಿಲ್ಲ, ಅಲ್ಲಿಗೆ ಹೋದ ನಂತರ ಗೊತ್ತಾಗಿದೆ.

3) ನಿಪಿ-4 ನ್ನು ದಾಖಲಿಸುವ ಸಮಯದಲ್ಲಿ ತನಿಖಾಧಿಕಾರಿಗಳು ಚಾಸಾ-1 ಈತನ ಬಳಿಯಲ್ಲಿ ಇದ್ದ ವಾಯ್ಸು ರೆಕಾರ್ಡರ್ ನ ಸಂಭಾಷಣೆಗಳನ್ನು ಕೇಳಿದ್ದಾರೆ. ಚಾಸಾ-1 ಈತನ ಬಳಿಯಲ್ಲಿ ಇದ್ದ ವಾಯ್ಸು ರೆಕಾರ್ಡರ್ ನ್ನು ಯಾವ ಸಮಯಕ್ಕೆ ಬಂದ್ ಮಾಡಲಾಗಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ವಾಯ್ಸು ರೆಕಾರ್ಡರ್ ನಲ್ಲಿ ನನ್ನ ವಾಯ್ಸು ಇರುವ ಬಗ್ಗೆ ಗೊತ್ತಿಲ್ಲ. ಕೇಳಿದರೆ ಗುರುತಿಸಬಲ್ಲೆ. ಸದರಿ ವಾಯ್ಸು ರೆಕಾರ್ಡರ್ ನ ಒಟ್ಟು ಸಮಯ 38 ನಿಮಿಷ ಎಂದರೆ ನಿಜ. ನಿಪಿ-4 ರಲ್ಲಿ ವಾಯ್ಸು ರೆಕಾರ್ಡರ್ ನಲ್ಲಿಯ ಎಲ್ಲಾ ಸಂಭಾಷಣೆಯನ್ನು ದಾಖಲಿಸಿಲ್ಲ ಎಂದರೆ, ಅಸ್ಪಷ್ಟವಾಗಿರುವುದನ್ನು ದಾಖಲಿಸಿಲ್ಲ. ನಮ್ಮ ಠಾಣೆಯಲ್ಲಿಯ ವಾಯ್ಸು ರೆಕಾರ್ಡರ್ ರನ್ನೇ ಎಲ್ಲಾ ತನಿಖೆಗಳಲ್ಲಿ ಬಳಸುತ್ತೇವೆ ಎಂದರೆ ನಿಜ. ನಿಪಿ-4 ಕ್ಕಾಗಿ ವಾಯ್ಸು ರೆಕಾರ್ಡರ್ ನ್ನು ಕೊಡುವ ಮೊದಲು ಅದನ್ನು ತಪಾಸು ಮಾಡಿ, ಅದರಲ್ಲಿ ಬೇರೆ ಯಾವುದೇ ಮುದ್ರಣಗಳು ಇರುವುದಿಲ್ಲ ಎಂಬುದನ್ನು ತೋರಿಸಿ, ಖಾತ್ರಿ ಪಡಿಸಿಕೊಳ್ಳಬೇಕು ಎಂದರೆ ನಿಜ ಮತ್ತು ಅದನ್ನು ಪಂಚನಾಮೆಯಲ್ಲಿ ದಾಖಲಿಸಬೇಕು ಎಂದರೆ ನಿಜ. ಆ ರೀತಿ ಪಂಚನಾಮೆಯಲ್ಲಿ ದಾಖಲಿಸಿಲ್ಲ ಎಂದರೆ ನಿಜ. ಆದರೆ ಅದನ್ನು ಖಾಲಿಯಾಗಿರುವುದನ್ನು ಚಾಸಾ-1 ಈತನಿಗೆ ಕೊಡುವ ಮೊದಲು ತೋರಿಸಿದ್ದೇವೆ. ಸದರಿ ವಾಯ್ಸು ರೆಕಾರ್ಡರ್ ಖಾಲಿಯಾಗಿರುವುದನ್ನು ಚಾಸಾ-1 ಈತನಿಗೆ ತೋರಿಸಿಲ್ಲ ಎಂದರೆ ಸರಿಯಲ್ಲ.

4) ನಿಶಾನೆ ಪಿ-31 ನ್ನು ಠಾಣೆಯಲ್ಲಿ ತಯಾರು ಮಾಡಿದ್ದು ಎಂದರೆ ಸರಿಯಲ್ಲ. ನಿಪಿ-31 ರ ದಾಖಲೆಯನ್ನು ನನಗೆ ತನಿಖಾಧಿಕಾರಿ ಕೊಟ್ಟಿದ್ದಕ್ಕೆ ನಾನು ಸಹಿ ಮಾಡಿಕೊಟ್ಟಿದ್ದೇನೆ ಎಂದರೆ, ಆ ಸಮಯದಲ್ಲಿ ಕೊಡುತ್ತಿದ್ದ ಪ್ರಮಾಣ ಪತ್ರಗಳು ಆ ರೀತಿಯಾಗಿಯೇ ಇತ್ತು. ನಂತರದಲ್ಲಿ ಅದು ಬದಲಾಗಿದೆ. ನಿ.ಪಿ-31 ರ ನಮೂನೆಯನ್ನು ತನಿಖಾಧಿಕಾರಿ ತಯಾರಿಸಿ ನೀಡಿದ್ದರು ಎಂದರೆ ನಿಜ. ನಿಶಾನೆ ಪಿ-4 ರಲ್ಲಾಗಲೀ ಮತ್ತು ಎಂ.ಒ-19 ರಲ್ಲಾಗಲೀ ಚಾಸಾ-1 ತನ್ನ ಕೆಲಸದ ಬಗ್ಗೆ ವಿಚಾರಣೆ ಮಾಡಿದ್ದ ಬಗ್ಗೆಯಾಗಲೀ, ಆರೋಪಿ ಆ ಕೆಲಸಕ್ಕಾಗಿ ಹಣ ಬೇಡಿದ್ದ ಬಗ್ಗೆ ದಾಖಲೆ ಇಲ್ಲ ಎಂದರೆ ಸರಿಯಲ್ಲ. ನಿ.ಪಿ-4 ರಲ್ಲಿ ಆರೋಪಿ ಹಣ ಬೇಡಿದ್ದ ಹೇಳಿಕೆ ಇಲ್ಲ ಎಂದರೆ ನಿಜ.

5) ನಾನು ಎಂಒ-12 ರ ದ್ರಶ್ಯಾವಳಿಗಳನ್ನು ಎಂಒ-19 ರ ಸಿಡಿಗೆ ವರ್ಗಾಯಿಸುವ ಸಮಯದಲ್ಲಿ ಫೋಟೋಗಳನ್ನು ತೆಗೆದಿದ್ದೆ. ಡಿವಿಆರ್ ನಲ್ಲಿಯ ಯಾವ ದ್ರಶ್ಯಾವಳಿಗಳನ್ನು ಸಿಡಿಗೆ ವರ್ಗಾಯಿಸಿದೆ ಎಂದು ನನಗೆ ಗೊತ್ತಿಲ್ಲ ಎಂದರೆ, ಒಂದು 4 ನಿಮಿಷದ್ದು , ಮತ್ತು 6 ನಿಮಿಷದ ಎರಡು ದ್ರಶ್ಯಾವಳಿಗಳನ್ನು ಸಿಡಿಗೆ ವರ್ಗಾಯಿಸಿದ್ದರು. ನಿಪಿ-12 ರ ಪಂಚನಾಮೆಯ

ಅಡಿಯಲ್ಲಿ ಆರೋಪಿತರ ಯಾವುದೇ ಧ್ವನಿಯ ಮಾದರಿಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಆದಿನ ತೆಗೆದ ಧ್ವನಿಯ ಮಾದರಿ ಎಷ್ಟು ನಿಮಿಷದ್ದು ಮತ್ತು ಎಷ್ಟು ಮಾದರಿಗಳನ್ನು ತೆಗೆದಿದೆ ಎಂದು ನಿ.ಪಿ-12 ರಲ್ಲಿ ದಾಖಲಿಸಿದೆ. ಆ ಮಾದರಿಗಳನ್ನು ಠಾಣೆಯ ವಾಯ್ಸು ರೆಕಾರ್ಡರ್ ನಲ್ಲಿಯೇ ದಾಖಲಿಸಿತ್ತು. ನಿಪಿ-13 ಮತ್ತು 18 ರ ಫೋಟೋಗಳನ್ನು, ನಿಪಿ-32 ಮತ್ತು 33 ರ ಪ್ರಮಾಣ ಪತ್ರಗಳನ್ನು ತನಿಖೆಗೆ ಪೂರಕವಾಗಿ ಸೃಷ್ಟಿಸಿದೆ ಎಂದರೆ ಸರಿಯಲ್ಲ. ನಿ.ಪಿ-4 ರ ಪಂಚನಾಮೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇರದೇ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಅದನ್ನು ಟ್ರ್ಯಾಪ್ ನಡೆದ ಜಾಗೆಯಲ್ಲಿಯೇ ಸಹಿ ಮಾಡಿದ್ದೆ.

6) ನಿ.ಪಿ-4 ರ ಸಮಯದಲ್ಲಿ ಬಳಸಿದ್ದ ವಾಯ್ಸು ರೆಕಾರ್ಡರ್ ನ್ನು ಯಾವಾಗ ಬಂದ್ ಮಾಡಿತ್ತು ಎಂದು ನನಗೆ ಗೊತ್ತಿಲ್ಲ. ನಾನು 2 ನೇ ಅರೋಪಿಯೊಂದಿಗೆ, 1 ನೇ ಆರೋಪಿಯ ಕೋಣೆಯಲ್ಲಿ ಮಾತನಾಡಿದ್ದೆ, ಅದು ನಿ.ಪಿ-4 ನ್ನು ದಾಖಲಿಸುವ ಸಮಯದಲ್ಲಿ. ಚಾಸಾ-1 ಈತನೊಂದಿಗೆ ಇದ್ದ ವಾಯ್ಸು ರೆಕಾರ್ಡರ್ ನಲ್ಲಿಯ ಎಲ್ಲಾ ಸಂಭಾಷಣೆಗಳನ್ನು ನಿ.ಪಿ-4 ರಲ್ಲಿ ದಾಖಲಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ತನಿಖೆಗೆ ಬೇಕಾಗುವ ಸಂಭಾಷಣೆಗಳನ್ನು ಮಾತ್ರವೇ ಲಿಪಿಕರಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ತನಿಖಾಧಿಕಾರಿಗೆ ವರದಿಗೆ ಸಹಾಯವಾಗಲೀ ಎಂದು ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿಸವಾಲುಃ 2 ನೇ ಆರೋಪಿ ಪರ ಶ್ರೀ ಎಸ್.ಎ. ವಕೀಲರಿಂದ**

7) ನಾನು ಮಣಿಪಾಲಕ್ಕೆ ಹೋದ ಎಷ್ಟು ಸಮಯದ ನಂತರ ಪಿರ್ಯಾದಿಯಿಂದ ಸೂಚನೆ ಬಂದಿತ್ತು ಎಂದರೆ, ಆ ಸೂಚನೆ ಅಧಿಕಾರಿಗೆ ಬಂದಿತ್ತು, ನನಗೆ ಅಲ್ಲ. ತನಿಖಾಧಿಕಾರಿಯು ಆರೋಪಿಯ ಕೋಣೆಯ ಒಳಗೆ ಹೋಗುವ ಮೊದಲು ಚಾಸಾ-1 ಇವರೊಂದಿಗೆ ಮಾತನಾಡಿದ್ದರು. ಆ ಸಮಯದಲ್ಲಿ ಆದೇಶದ ಪ್ರತಿ ಚಾಸಾ-1 ಇವರ ಬಳಿಯಲ್ಲಿ ಇತ್ತು, ಆಗ ತನಿಖಾಧಿಕಾರಿಗೆ ತೋರಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

8) 1 ನೇ ಅರೋಪಿಯ ಕೋಣೆಯ ಒಳಗೆ ಹೋದ ಎಷ್ಟು ಸಮಯದ ನಂತರ 2 ನೇ ಆರೋಪಿಯನ್ನು ದಸ್ತಗಿರಿ ಮಾಡಿದ್ದು ಎಂದು ಈಗ ನೆನಪಿಲ್ಲ. ಅದಕ್ಕಾಗಿ ತನಿಖಾಧಿಕಾರಿ ಸೂಚಿಸಿದ್ದರು. 2 ನೇ ಆರೋಪಿಯನ್ನು ಹಿಡಿದ ಕೂಡಲೇ ಅವರ ಕೈಗಳನ್ನು ತೊಳೆಸಿತ್ತಾ

ಎಂದರೆ, ನಿಜ. 2 ನೇ ಅರೋಪಿಯನ್ನು ಹಿಡಿದ ನಂತರ ಕೊನೆಯವರೆಗೂ ಅವರು 1 ನೇ ಆರೋಪಿಯ ಕೋಣೆಯಲ್ಲಿ ಇದ್ದರು. ಅದು ಆದಿನ ರಾತ್ರಿ 8.45 ರವರೆಗೆ. ಸಾಕ್ಷಿಯು ನಂತರ ಅವರು ಕೊಟ್ಟಿರುವ ಹಣವನ್ನು ಇಟ್ಟಿರುವ ಜಾಗೆಗೆ ಒಮ್ಮೆ ಕರೆದುಕೊಂಡು ಹೋಗಿದ್ದರು ಎನ್ನುತ್ತಾರೆ. ಅದು ಯಾವ ಸಮಯಕ್ಕೆ ಎಂದರೆ, ಅವರ ಕೈ ತೊಳೆದ ನಂತರ.

9) ನಿ.ಪಿ-32 ಮತ್ತು 33 ರ ಪ್ರಮಾಣ ಪತ್ರದಲ್ಲಿ ಆದಿನ ಬಳಸಿದ ಕ್ಯಾಮರಾ ಮತ್ತು ಅದರ ವಿವರಗಳನ್ನು ದಾಖಲಿಸಿಲ್ಲ ಎಂದರೆ ನಿಜ. ಆ ಪ್ರಮಾಣಪತ್ರಗಳನ್ನು ನಮ್ಮ ತನಿಖಾಧಿಕಾರಿ ತಯಾರಿಸಿ , ನನ್ನ ಸಹಿ ಪಡೆದಿದ್ದರು ಎಂದರೆ, ಆಗ ಇದ್ದ ನಮೂನೆಯಂತೆ ಸಹಿ ಪಡೆದಿದ್ದರು. ನನ್ನ ಸಮಕ್ಷಮ 2 ನೇ ಆರೋಪಿಯ ಯಾವುದೇ ಮಾದರಿ ಧ್ವನಿಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಅದಕ್ಕಾಗಿ ನಾನು ಯಾವುದೇ ಪೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಆ ಪೋಟೋಗಳನ್ನು ತಪ್ಪಾಗಿ ಪ್ರಮಾಣೀಕರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ನಿಪಿ-2 ರ ಪಂಚನಾಮೆಯನ್ನು ಬರೆದುಕೊಂಡಿಲ್ಲ ಎಂದರೆ ಸರಿಯಲ್ಲ. ಮತ್ತು ನನಗೆ ನಿಪಿ-4 ರ ಪಂಚನಾಮೆಯ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿ ನಿಪಿ-2 ಮತ್ತು 4 ರ ಪ್ರಕ್ರಿಯೇಗಳನ್ನು ಮಾಡಿದ್ದರು ಎಂಬುದಕ್ಕಾಗಿ ಅವರಿಗೆ ಸಹಾಯವಾಗಲೀ ಎಂದು ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಕೆ.ಎಸ್. ಗಂಗಣ್ಣವರ್)
ಸತ್ರ ನ್ಯಾಯಾಧೀಶರು/ವಿಶೇಷ ನ್ಯಾಯಾಧೀಶರು
ಉಡುಪಿ